**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ,**

**ಕೆ.ಆರ್.ನಗರ .**

**ಸಿ.ಸಿ ನಂಃ 121 / 2024**

| | | |
|---|---|---|
| **ಸಾಕ್ಷಿಯ ಹೆಸರುಃ** | **ಜಿ.ಕೃಷ್ಣರಾಜು** | **ಫ್ರಾಸಾಃ** 10 |
| **ತಂದೆಯ ಹೆಸರುಃ** | **ಬುಡ್ಡೇಗೌಡ** | **ಚಾಸಾ:**21 |
| **ವಯಸ್ಸುಃ** | 49 **ವರ್ಷ** | **ದಿಃ** 14-01-2026 |
| **ಉದ್ಯೋಗಃ** | **ಪೋಲಿಸ್ ನೀರಿಕ್ಷಕರು, ಶನಿವಾರಸಂತೆ ಪೋಲಿಸ್ ಠಾಣೆ** | **ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.** |
| **ವಾಸ ಸ್ಥಳಃ** | **ಶನಿವಾರಸಂತೆ, ಕೊಡಗು** | |

**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ**

ನಾನು 01.02.2023 ರಿಂದ 05.05.2025 ರವರೆಗೆ ಸಾಲಿಗ್ರಾಮ ಪೋಲಿಸ್ ಠಾಣೆಯಲ್ಲಿ ಪೋಲಿಸ್ ನೀರಿಕ್ಷನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 22.11.2023 ರಂದು ನಾನು ಈ ಪ್ರಕರಣದ ಕಡತವನ್ನು ಪೋಲಿಸ್ ಉಪನೀರಿಕ್ಷಕರಾದ ಕುಮುದಾರವರಿಂದ ರವರಿಂದ ಪಡೆದು ತನಿಖೆಯನ್ನು ಮುಂದುವರಿಸಿ ಕೆ ಆರ್ ನಗರದ ಸರಕಾರಿ ಆಸ್ಪತ್ರೆಯ ಶವಾಗಾರಕ್ಕೆ ಬೇಟಿ ನೀಡಿ ಮೃತ ರವಿ ಬಿನ್ ಕಿಕ್ಕೀರೇಗೌಡ ಶವದ ಪಂಚನಾಮೆ ಮಾಡಲು ಪಂಚರಾದ ಚಾಸಾ-8 ರಿಂದ 10 ರವರಿಗೆ ನೋಟಿಸನ್ನು ನೀಡಿರುತ್ತೇನೆ. ನಂತರದಲ್ಲಿ ಚಾಸಾ-5 ಮತ್ತು 6 ರವರ ಹೇಳಿಕೆಗಳನ್ನು ಪಡೆದುಕೊಂಡು ಮೃತರ ಮರಣೋತ್ತರ ಪರೀಕ್ಷೆಗಾಗಿ ಚಾಸಾ-16 ರವರಿಗೆ ಚಾಸಾ-18 ರವರ ಮೂಲಕ ನಿವೇದನೆಯನ್ನು ಸಲ್ಲಿಸಿರುತ್ತೇನೆ. ನಂತರ ಅದೇ ದಿನ ಬೆಳಿಗ್ಗೆ 8.30 ಗಂಟೆಯಿಂದ 10.30 ಗಂಟೆಯವರೆಗೆ ಶವ ಪಂಚನಾವೆಯನ್ನು ಮಾಡಿ ಮುಗಿಸಿರುತ್ತೇನೆ. ನಂತರ ಮೃತರ ಮರಣೋತ್ತರ ಪರೀಕ್ಷೆ ನಡೆಸಿ ಮುಗಿದ ಬಳಿಕ ಮೃತದೇಹವನ್ನು ಅವರ ಚಾಸಾ-5 ರವರಿಗೆ ಹಸ್ತಾಂತರಿಸಿರುತ್ತೇನೆ.

ನಂತರ ಅದೇ ದಿನ ಘಟನಾ ಸ್ಥಳಕ್ಕೆ ಹೋಗಿ ಚಾಸಾ–11 ಮತ್ತು 12 ರವರಿಗೆ ನೋಟಿಸನ್ನು ನೀಡಿ ಸ್ಥಳಕ್ಕೆ ಬರ ಮಾಡಿಕೊಂಡು ಚಾಸಾ–2 ರವರ ಸಮಕ್ಷಮದಲ್ಲಿ ಘಟನಾ ಸ್ಥಳದ ಪಂಚನಾಮೆಯನ್ನು ಸಂಜೆ 5.15 ರಿಂದ 6.20 ರವರೆಗೆ ಮಾಡಿ ಮುಗಿಸಿರುತ್ತೇನೆ ಹಾಗೂ ಘಟನಾ ಸ್ಥಳದ ಪಂಚನಾಮೆಯ ಪೋಟೊಗಳನ್ನು ತೆಗೆಸಿರುತ್ತೇನೆ.

ನಂತರ ಅದೇ ದಿನ ಚಾಸಾ–3 ಮತ್ತು ಚಾಸಾ–4 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ.

ನಂತರ ಅದೇ ದಿನ ನಾನು ಚುಂಚನಕಟ್ಟೆ ಉಪಠಾಣೆಗೆ ತೆರಳಿ ಉಪಠಾಣೆಯ ಆವರಣದಲ್ಲಿ ನಿಲ್ಲಿಸಿದ್ದ ಅಪಘಾತ ಪಡಿಸಿದ ವಾಹನ ಸಂಖ್ಯೆ ಕೆಎ–45–ಎಂ–4382 ಕಾರು ಮತ್ತು ಅಪಘಾಕ್ಕೀಡಾದ ವಾಹನ ಸಂಖ್ಯೆ ಕೆಎ–09–ಜೆಎ–7154 ದ್ವಿಚಕ್ರ ವಾಹನಗಳನ್ನು ಪಂಚರುಗಳಾದ ಚಾಸಾ–3 ಮತ್ತು 11 ರವರ ಸಮಕ್ಷಮ ಸಂಜೆ 6.30 ರಿಂದ 7.30 ಗಂಟೆಯವರೆಗೆ ಮಹಜರ್ ಕ್ರಮ ಜರುಗಿಸಿ ಜಪ್ತಿಪಡಿಸಿಕೊಂಡಿರುತ್ತೇನೆ. ಹಾಗೂ ಜಪ್ತಿ ಪಂಚನಾಮೆಯ ಪೋಟೊಗಳನ್ನು ತೆಗೆಸಿರುತ್ತೇನೆ. ನಂತರ ಪೋಲಿಸ್ ಠಾಣೆಗೆ ಮರಳಿ ಬಂದು ಮಾಲುಪಟ್ಟಿಯನ್ನು ತಯಾರಿಸಿ ನ್ಯಾಯಾಲಯಕ್ಕೆ ನೀವೇದಿಸಿಕೊಂಡಿರುತ್ತೇನೆ.

ದಿನಾಂಕ 23.11.2023 ರಂದು ಚಾಸಾ–2 ರವರ ಹೇಳಿಕೆಯನ್ನು ಪಡೆದಿರುತ್ತೇನೆ.

ದಿನಾಂಕ 26.11.2023 ರಂದು ಅಪಘಾತ ಪಡಿಸಿದ ವಾಹನ ಸಂಖ್ಯೆ ಕೆಎ–45–ಎಂ–4382 ಕಾರಿನ ಆರ್.ಸಿ ಮಾಲೀಕರಾದಚಾಸಾ–7 ರವರಿಗೆ ಐ.ಎಂ.ವಿ ಕಾಯ್ದೆ ಕಲಂ 133 ರ ಅಡಿಯಲ್ಲಿ ನೋಟಿಸನ್ನು ಜಾರಿ ಮಾಡಿರುತ್ತೇನೆ. ದಿನಾಂಕ 28.11.2023 ರಂದು ಸದರಿ ನೋಟಿಸಿಗೆ ಚಾಸಾ–7 ರವರು ಉತ್ತರವನ್ನು ನೀಡಿರುತ್ತಾರೆ ಹಾಗೂ ಅಪಘಾತದ ಸಮಯದಲ್ಲಿ ಸದರಿ ಕಾರನ್ನು ಆರೋಪಿಗೆ ಚಾಲನೆ ಮಾಡಲು ಕೊಟ್ಟಿರುವುದಾಗಿ ಚಾಸಾ–7 ರವರು ತಮ್ಮ ಉತ್ತರದಲ್ಲಿ ಹೇಳಿರುತ್ತಾರೆ.

ಅದೇ ದಿನ ಆರೋಪಿಯು ಸ್ವತಃ ಠಾಣೆಗೆ ಹಾಜರಾಗಿದ್ದು, ಆರೋಪಿಗೆ ಸಿ.ಆರ್.ಪಿ.ಸಿ ಕಲಂ 41–ಎ ರಡಿಯಲ್ಲಿ ನೋಟಿಸನ್ನು ಜಾರಿ ಮಾಡಿ ಆರೋಪಿಯ ಚಾಲನಾ ಪರವಾನಿಗೆ ಪತ್ರವನ್ನು ಮತ್ತು ಅಪಘಾತಪಡಿಸಿದ ಕಾರಣ ದಾಖಲಾತಿಗಳ ಪ್ರತಿಗಳನ್ನು ಆರೋಪಿಯಿಂದ ಪಡೆದಿರುತ್ತೇನೆ.

ದಿನಾಂಕ 29.11.2023 ರಂದು ಅಪಘಾತ ಪಡಿಸಿದ ಮತ್ತು ಅಪಘಾತಕ್ಕೀಡಾದ ವಾಹನಗಳನ್ನು ಪರಿಶೀಲಿಸಿ ವರದಿ ನೀಡುವಂತೆ ಚಾಸಾ-13 ರವರಿಗೆ ಪತ್ರದ ಮೂಲಕ ನಿವೇದಿಸಿಕೊಂಡಿರುತ್ತೇನೆ. ಅದರ ಪ್ರಕಾರ ದಿನಾಂಕ 04.12.2023 ರಂದು ಚಾಸಾ-13 ರವರು ಚುಂಚನಕಟ್ಟೆ ಪೋಲಿಸ್ ಉಪಠಾಣೆಯ ಆವರಣಕ್ಕೆ ಬಂದು ಅಪಘಾತ ಪಡಿಸಿದ ಮತ್ತು ಅಪಘಾತಕ್ಕೀಡಾದ ವಾಹನಗಳನ್ನು ಪರಿಶೀಲಿಸಿ ವರದಿಯನ್ನು ನಂತರ ನೀಡುವುದಾಗಿ ಹೇಳಿರುತ್ತಾರೆ.

ಅದೇ ದಿನ ದಾಖಲಾತಿಗಳನ್ನು ಪರಿಶೀಲಿಸಿ ಅಪಘಾತ ಪಡಿಸಿದ ಕಾರಿನ ಮಾಲೀಕರಾದ ಚಾಸಾ-7 ರವರಿಂದ ಇಂಡೆಮಿನಿಟಿ ಬಾಂಡ್ ನ್ನು ಪಡೆದು ವಾಹನವನ್ನು ಚಾಸಾ-7 ರವರಿಗೆ ಬಿಡುಗಡೆ ಮಾಡಿರುತ್ತೇನೆ.

ದಿನಾಂಕ 14.12.2023 ರಂದು ಮೃತ ರವಿರವರ ಹೆಂಡತಿಯಾದ ಚಾಸಾ-5 ರವರಿಗೆ ಐ.ಎಂ.ವಿ ಕಾಯ್ದೆ ಕಲಂ 133 ರ ಅಡಿಯಲ್ಲಿ ನೋಟಿಸನ್ನು ಜಾರಿ ಮಾಡಿರುತ್ತೇನೆ. ನಂತರ ಸದರಿ ನೋಟಿಸಿಗೆ ಚಾಸಾ-5 ರವರಿಂದ ಉತ್ತರವನ್ನು ಪಡೆದು ಅವರಿಂದ ಅಪಘಾತಕ್ಕೆ ಒಳಗಾದ ದ್ವಿಚಕ್ರವಾಹನದ ದಾಖಲಾತಿಗಳ ಪ್ರತಿಗಳನ್ನು ಪಡೆದಿರುತ್ತೇನೆ. ಅದೇ ದಿನ ದಾಖಲಾತಿಗಳನ್ನು ಪರಿಶೀಲಿಸಿ ಅಪಘಾತಕ್ಕೀಡಾದ ದ್ವಿಚಕ್ರ ವಾಹನವನ್ನು ಚಾಸಾ-5 ರವರಿಂದ ಇಂಡೆಮಿನಿಟಿ ಬಾಂಡ್ ನ್ನು ಪಡೆದು ವಾಹನವನ್ನು ಚಾಸಾ-5 ರವರಿಗೆ ಬಿಡುಗಡೆ ಮಾಡಿರುತ್ತೇನೆ.

ದಿನಾಂಕ 19.12.2023 ರಂದು ಮೃತ ರವಿರವರ ಮರಣೋತ್ತರ ಪರೀಕ್ಷೆಯ ವರದಿಯನ್ನು ಪಿ.ಸಿ-552 ರವರಾದ ಬೀರೇಶ್ ರವರ ಮುಖಾಂತರ ಸ್ವೀಕರಿಸಿ ಕಡತಕ್ಕೆ ಅಳವಡಿಸಿರುತ್ತೇನೆ. ಅದೇ ದಿನ ಚಾಸಾ-13 ರವರಿಂದ ವಾಹನ ತಪಾಸಣೆ ವರದಿಗಳನ್ನು ಸಹ ಪಡೆದು ಕಡತಕ್ಕೆ ಅಳವಡಿಸಿರುತ್ತೇನೆ.

ತನಿಖಾ ಕಾಲಕ್ಕೆ ತೆಗೆದು ಭಾವಚಿತ್ರಗಳ ಸಂಬಂಧ ಚಾಸಾ-18 ರವರಿಂದ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 65(ಬಿ) ರಡಿಯಲ್ಲಿ ಪ್ರಮಾಣ ಪತ್ರವನ್ನು ಪಡೆದು ಕಡತಕ್ಕೆ ಅಳವಡಿಸಿರುತ್ತೇನೆ. ನಂತರ ಸಮಗ್ರ ತನಿಖೆಯನ್ನು ಪೂರೈಸಿ ಮೇಲ್ನೋಟಕ್ಕೆ ಆರೋಪಿಯ ವಿರುದ್ಧ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ನಾನು ಈ ಪ್ರಕರಣದಲ್ಲಿ ಆರೋಪಿಯ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ನಿಪಿ.2 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು, ನಿಪಿ.3 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.3(ಡಿ) ಎಂದು, ನಿಪಿ.4 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.4(ಡಿ) ಎಂದು, ನಿಪಿ.5 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.5(ಎ) ಎಂದು, ನಿಪಿ.8 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.8(ಎ) ಎಂದು, ನಿಪಿ.9 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.9(ಎ) ಎಂದು, ನಿಪಿ.10 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.10(ಎ) ಎಂದು, ನಿಪಿ.11 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.11(ಎ) ಎಂದು, ನಿಪಿ.12 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.12(ಎ) ಎಂದು, ನಿಪಿ.13 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.13(ಎ) ಎಂದು, ನಿಪಿ.14 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.14(ಬಿ) ಎಂದು, ಫೋಟೋಗಳನ್ನು ನಿಪಿ.15 ರಿಂದ 24 ಎಂದು, ಇಂಡಿಮಿನಿಟಿ ಬಾಂಡ್ ನ್ನು ನಿಪಿ.25 ಎಂದು, ಸಾಕ್ಷಿಯ ಸಹಿಯನ್ನು ನಿಪಿ.25(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿಯ ಪರ ಶ್ರೀಮತಿ ಕೆ.ಕೆ. ವಕೀಲರಿಂದ ಃ**

1. ನಾನು ಘಟನಾ ಸ್ಥಳಕ್ಕೆ ಹೋಗದೇ ಕೇವಲ ಠಾಣೆಯಲ್ಲಿಯೇ ಕುಳಿತು ಘಟನಾ ಸ್ಥಳದ ಪಂಚನಾಮೆಯನ್ನು ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.2 ರ ಪಶ್ಚಿಮ ದಿಕ್ಕಿಗೆ ರಾಮೇಗೌಡರ ಮನೆ ಇದೆ ಎಂದು ನಮೂದಾಗಿದ್ದು, ಸದರಿಯವರನ್ನು ಯಾಕೆ ಈ ಪ್ರಕರಣದಲ್ಲಿ ಪಂಚರಾಗಿ ಬರ ಮಾಡಿಕೊಂಡಿರುವುದಿಲ್ಲ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಸದರಿ ರಾಮೇಗೌಡರು ಲಭ್ಯವಿರದ ಕಾರಣ ಅವರನ್ನು ಪಂಚರಾಗಿ ಬರ ಮಾಡಿಕೊಂಡಿರುವುದಿಲ್ಲ ಎಂದು ನುಡಿದಿರುತ್ತಾರೆ.

2. ಅಪಘಾತಪಡಿಸಿದ ಮತ್ತು ಅಪಘಾತಕ್ಕೀಡಾದ ವಾಹನಗಳು ಯಾವ ದಿಕ್ಕಿನಲ್ಲಿ ಬರುತ್ತಿದ್ದವು ಎಂದು ನಾನು ನಿಪಿ.4 ರಲ್ಲಿ ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತಪಡಿಸಿದ ಮತ್ತು ಅಪಘಾತಕ್ಕೀಡಾದ ವಾಹನಗಳಿಗೆ ಆದ ಹಾನಿಯ ವಿವರಗಳನ್ನು ನಿಪಿ.14 ಮತ್ತು ಬಾಸಾ-13 ರವರು ನೀಡಿದ ವರದಿಯಲ್ಲಿ ವಿಭಿನ್ನವಾಗಿ ನಮೂದಿಸಲಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಅಪಘಾತದಲ್ಲಿ ಆರೋಪಿಯ ಯಾವುದೇ ತಪ್ಪು ಇರದಿದ್ದರು ಸಹ ಕೇವಲ ಮೃತರ ಕುಟುಂಬಕ್ಕೆ ಸಹಾಯ ಮಾಡುವ ಉದ್ದೇಶದಿಂದ ನಾನು ಆರೋಪಿಯ ವಿರುದ್ದ ಸುಳ್ಳು ದೋಷಾರೋಪಣ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಮೃತ ರವಿರವರು ಮಧ್ಯಪಾನ

ಮಾಡಿ ತಮ್ಮ ದ್ವಿಚಕ್ರ ವಾಹನ ಚಲಾಯಿಸಿದರ ಪರಿಣಾಮ ಅಪಘಾತವಾಗಿದ್ದು, ಸದರಿ ವಿಷಯವನ್ನು ಮರೆ ಮಾಚುವ ಉದ್ದೇಶದಿಂದ ನಾನು ಉದ್ದೇಶಪೂರಕವಾಗಿ ಎಫ್.ಎಸ್.ಎಲ್ ವರದಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಮೃತ ರವಿ ರವರೇ ತಮ್ಮ ದ್ವಿಚಕ್ರ ವಾಹನವನ್ನು ಅಲಕ್ಷತನದಿಂದ ಚಲಾಯಿಸಿದರ ಪರಿಣಾಮ ಅಪಘಾತವಾಗಿದ್ದರು ಸಹ ನಾನು ಆರೋಪಿಯ ವಿರುದ್ಧ ಸುಳ್ಳು ದೋಷಾರೋಪಣ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

3. ಟೈಯರ್ ಉಜ್ಜಿದ ಗುರುತುಗಳು ನಿಪಿ.4 ರಲ್ಲಿ ನಾನು ತೋರಿಸಿದ್ದು, ಸದರಿ ವಿಷಯವನ್ನು ನಾನು ನಿಪಿ.3 ರಲ್ಲಿ ನಮೂದಿಸಿರುವುದಿಲ್ಲ. ನಾನು ಆರೋಪಿಯ ವಿರುದ್ಧ ಸುಳ್ಳು ದೋಷಾರೋಪಣ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದಿರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಃ ಇರುವುದಿಲ್ಲ.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**1 ನೇ ಹೆಚ್ಚುವರಿ ಸಿವಿಲ್ ಜೆಎಂಎಫ್‌ಸಿ ನ್ಯಾಯಾಧೀಶರು**
**ಕೆ.ಆರ್.ನಗರ**

********ಠಾಣೆಗೆ ಮರಳಿ ಬಂದು ಕೆ ಆರ್ ನಗರ ಪೋಲಿಸ್ ಠಾಣೆಯ ಆವರಣದಲ್ಲಿ ನಿಲ್ಲಿಸಿದ್ದ ಅಪಘಾತ ಪಡಿಸಿದ ಮತ್ತು ಅಪಘಾಕ್ಕೀಡಾದ ವಾಹನವನ್ನು ಪಂಚರ ಸಮಕ್ಷಮ ಸಂಜೆ 6.00 ರಿಂದ 7.00 ಗಂಟೆಯವರೆಗೆ ಮಹಜರ್ ಕ್ರಮ ಜರುಗಿಸಿ ಜಪ್ತಿಪಡಿಸಿಕೊಂಡಿರುತ್ತೇನೆ.

ನಂತರ ಅದೇ ದಿನ ಚಾಸಾ-2 ರಿಂದ ಚಾಸಾ-7 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ.

ದಿನಾಂಕ 10.04.2015 ರಂದು ಗಾಯಾಳು ಆದ ಚಾಸಾ-7 ರವರ ಗಾಯದ ಪ್ರಮಾಣ ಪತ್ರವನು ಜೆ.ಎಸ್.ಎಸ್ ಆಸ್ಪತ್ರೆಯಿಂದ ಸಿಬ್ಬಂದಿಗಳ ಮುಖಾಂತರ ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

ದಿನಾಂಕ 20.04.2015 ರಂದು ಅಪಘಾತ ಪಡಿಸಿದ ಮತ್ತು ಅಪಘಾತಕ್ಕೀಡಾದ ವಾಹನಗಳನ್ನು ಪರಿಶೀಲಿಸಿ ವರದಿ ನೀಡುವಂತೆ ಚಾಸಾ-17 ರವರಿಗೆ ಪತ್ರದ ಮೂಲಕ ನಿವೇದಿಸಿಕೊಂಡಿರುತ್ತೇನೆ. ಅದರ ಪ್ರಕಾರ ಚಾಸಾ-17 ರವರು ಅದೇ ದಿನ ಕೆ ಆರ್ ನಗರ ಪೋಲಿಸ್ ಠಾಣೆಯ ಆವರಣಕ್ಕೆ ಬಂದು ಅಪಘಾತ ಪಡಿಸಿದ ಮತ್ತು ಅಪಘಾತಕ್ಕೀಡಾದ ವಾಹನಗಳನ್ನು ಪರಿಶೀಲಿಸಿ ವರದಿಯನ್ನು ನಂತರ ನೀಡುವುದಾಗಿ ಹೇಳಿರುತ್ತಾರೆ.

ದಿನಾಂಕ 28.04.2015 ರಂದು ಮೃತರ ಪಿ.ಎಮ್. ವರದಿಯನ್ನು ಹಾಗೂ ವಿಶ್ರವನ್ನು ಚಾಸಾ-17 ರವರ ಮುಖಾಂತರ ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಂತರ ಸದರಿ ವಿಶ್ರವನ್ನು ಮಾಲು ಪಟ್ಟಿಯ ಮೂಲಕ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

ದಿನಾಂಕ 12.05.2015 ರಂದು ಚಾಸಾ-23 ರವರ ಮೂಖಾಂತರ ವಿಶ್ರದ ಬಾಟಲ್ ಗಳನ್ನು ಮೈಸೂರಿನ ಪ್ರಯೋಗಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ.

ದಿನಾಂಕ 10.06.2015 ರಂದು ಅಪಘಾತ ಪಡಿಸಿದ ವಾಹನದ ಮಾಲೀಕರಾದ ಚಾಸಾ-12 ರವರಿಗೆ ಕಲಂ.133 ರಡಿಯಲ್ಲಿ ನೋಟಿಸನ್ನು ನೀಡಿ ಉತ್ತರನ್ನು ಪಡೆದು ಅವರ ಹೇಳಿಕೆಯನ್ನು ದಾಖಲಿಸಿರುತ್ತೇನೆ.

ದಿನಾಂಕ 11.06.2015 ರಂದು ಕೆಎ-45-ಎಲ್-9750 ಮೋಟಾರ್ ಸೈಕಲಿನ ಮಾಲೀಕರಾದ ಚಾಸಾ-12 ರವರು ದಾಖಲಾತಿಗಳನ್ನು ಹಾಜರುಪಡಿಸಿದ ಮೇರೆಗೆ

ದಾಖಲಾತಿಗಳನ್ನು ಪರಿಶೀಲಿಸಿ ಇಂಡೆಮಿನಿಟಿ ಬಾಂಡ್ ನ್ನು ಪಡೆದು ಚಾಸಾ-12 ರವರಿಗೆ ಬಿಡುಗಡೆ ಮಾಡಿರುತ್ತೇನೆ.

ದಿನಾಂಕ 05.07.2015 ರಂದು 1ನೇ ಆರೋಪಿಯು ಠಾಣೆಗೆ ಸ್ವತಃ ಹಾಜರಾದ ಮೇರೆಗೆ ಆತನನ್ನು ವಿಚಾರಿಸಿ ಸಿ.ಆರ್.ಪಿ.ಸಿ ಕಲಂ 41 ಅಡಿಯಲ್ಲಿ ನೋಟಿಸನ್ನು ನೀಡಿ ಬಪಿಡುಗಡೆ ಮಾಡಿರುತ್ತೇನೆ.

ದಿನಾಂಕ 10.07.2015 ರಂದು ಚಾಸಾ-17 ರವರು ಅಪಘಾತ ಪಡಿಸಿದ ಮತ್ತು ಅಪಘಾತಕ್ಕೀಡಾದ ವಾಹನಗಳ ವರದಿಯನ್ನು ನೀಡಿದ್ದು, ಅದನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿರುತ್ತೇನೆ.

ಅದೇ ದಿನ ರಾಸಾಯನಿಕ ಪ್ರಯೋಗಾಲಯದ ವರದಿಯನ್ನು ಮತ್ತು PME ವರದಿಯನ್ನು ಪಡೆದು ಅದರ ಬಗ್ಗೆ ಅಭಿಪ್ರಾಯ ನೀಡುವಂತೆ ವೈಧ್ಯರಿಗೆ ಕಳುಹಿಸಿಕೊಟ್ಟಿರತ್ತೇನೆ.

ದಿನಾಂಕ 24.07.2015 ರಂದು ವಾಹನ ಸಂಖ್ಯೆ ಕೆಎ-45-ಕ್ಯೂ-4629 ರ ಆರ್.ಸಿ ಮಾಲಿಕರಿಗೆ ಕಲಂ.133 ರಡಿಯಲ್ಲಿ ನೋಟಿಸನ್ನು ನೀಡಿ ಉತ್ತರನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ಆರ್.ಸಿ ಮಾಲಿಕರಿಂದ ಸೂಕ್ತ ದಾಖಲಾತಿಗಳನ್ನು ಪಡೆದು ಪರಿಶೀಲಿಸಿ ಇಂಡೆಮಿನಿಟಿ ಬಾಂಡ್ ನ್ನು ಪಡೆದು ಆರ್.ಸಿ ಮಾಲೀಕರಿಗೆ ಬಿಡುಗಡೆ ಮಾಡಿರುತ್ತೇನೆ.